**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ,**

**ಕೆ.ಆರ್.ನಗರ .**

**ಸಿ.ಸಿ ನಂಃ 121/2024**

| | | |
|---|---|---|
| **ಸಾಕ್ಷಿಯ ಹೆಸರುಃ** | **ಚಂದು ಕುಮಾರ** | **ಫ್ರಾಸಾಃ 9** |
| **ತಂದೆ ಹೆಸರುಃ** | **ಮಹದೇವ** | **ಚಾಸಾಃ 12** |
| **ವಯಸ್ಸುಃ** | **22 ವರ್ಷ** | **ದಿಃ 25-10-2025** |
| **ಉದ್ಯೋಗಃ** | **ವಿದ್ಯಾರ್ಥಿ** | **ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.** |
| **ವಾಸ ಸ್ಥಳಃ** | **ಅಂಕನಹಳ್ಳಿ ಗ್ರಾಮ** | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನನಗೆ ಈ ಪ್ರಕರಣದ ಘಟನೆಯ ಬಗ್ಗೆ ಗೊತ್ತಿರುವುದಿಲ್ಲ. ನಾನು ಈ ಪ್ರಕರಣಕ್ಕೆ ಸಂಬಂದಿಸಿದಂತೆ ಯಾವುದೇ ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ ಹಾಗೂ ಪೋಲಿಸರು ನನ್ನ ಸಮಕ್ಷಮ ಯಾವುದೇ ಘಟನಾ ಸ್ಥಳದ ಪಂಚನಾಮೆ ಅಥವಾ ಜಪ್ತಿ ಪಂಚನಾಮೆ ಮಾಡಿರುವುದಿಲ್ಲ. ನನಗೆ ಈ ಪ್ರಕರಣದ ಆರೋಪಿತರ ಪರಿಚಯ ಇಲ್ಲ ಮತ್ತು ಅವರನ್ನು ಇದೆ ಮೊದಲ ಬಾರಿಗೆ ನಾನು ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ. ನನಗೆ ಈ ಪ್ರಕರಣದ ಘಟನೆಯ ಬಗ್ಗೆ ಆಗಲಿ ಅಥವಾ ಘಟನಾ ಸ್ಥಳದ ಬಗ್ಗೆ ಆಗಲಿ ನನಗೆ ಮಾಹಿತಿ ಇರುವುದಿಲ್ಲ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲಿಸರಿಗೆ ಯಾವುದೆ ಹೇಳಿಕೆಯನ್ನು ನೀಡಿರುವುದಿಲ್ಲ.

( **ಈ ಹಂತದಲ್ಲಿ ಮಾನ್ಯ ಹಿ.ಸ.ಸ.ಅ ರವರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಡಲು ಅನುಮತಿ ಕೋರಿದರು – ಅನುಮತಿ ನೀಡಲಾಯಿತು**)

**ಪಾಟೀ ಸವಾಲು ಃ ಮಾನ್ಯ ಸ.ಸ.ಅ. ರವರಿಂದಃ**

ದಿಃ 22.11.2023 ರಂದು ಸಂಜೆ 05.15 ರಿಂದ 06.20 ಗಂಟೆಯವರೆಗೆ ಚಾಸಾಃ2 ರವರು ತೋರಿಸಿ ಕೊಟ್ಟ ಮೇರೆಗೆ ನನ್ನ ಮತ್ತು ಚಾಸಾಃ11 ರವರ ಸಮಕ್ಷಮದಲ್ಲಿ ಪೋಲಿಸರು ಈ ಪ್ರಕರಣದ ಘಟನಾ ಸ್ಥಳದ ಪಂಚನಾಮೆ ಮಾಡಿ ಅಪಘಾತಪಡಿಸಿದ ಮತ್ತು ಅಪಘಾತಕ್ಕೀಡಾದ ವಾಹನಗಳನ್ನು ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈಗಾಗಲೇ ನಿಪಿ.3 ಎಂದು

ನಿಶಾನೆಪಡಿಸಿಲಾದ ಘಟನಾ ಸ್ಥಳದ ಪಂಚನಾಮೆಯನ್ನು ಹಾಗೂ ನಿಪಿ-4 ಎಂದು ಗುರುತಿಸಲಾದ ಸ್ಥಳ ನಕಾಶೆಯನ್ನು ತೋರಿಸಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ನಿಪಿ.3 ಮತ್ತು ನಿಪಿ.4 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಮತು ನಿಪಿ-4(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ನಿಪಿ-3 ಮತ್ತು ನಿಪಿ-4 ರಲ್ಲಿ ತಾನು ಪೋಲಿಸರ ಹೇಳಿಕೆಯ ಮೇರೆಗೆ ಠಾಣೆಯಲ್ಲಿ ಸಹಿ ಹಾಕಿರುತ್ತೇನೆ ಹಾಗೂ ನಿಪಿ-3 ಮತ್ತು ನಿಪಿ-4 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ವಕೀಲರವರಿಂದಃ**

ತಮ್ಮ ಪರ ಯಾವುದೇ ಪಾಟೀ ಸವಾಲು ಇಲ್ಲ ಎಂದು ಆರೋಪಿ ಪರ ವಕೀಲರು ಹೇಳಿರುತ್ತಾರೆ.

**ಮರುವಿಚಾರಣೆ ಃ ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು**
**ಕೆ.ಆರ್.ನಗರ**